ದಿಃ 12.11.2025 ಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀಸವಾಲು ಆರೋಪಿ ಪರ ಶ್ರೀ. ಜಿ.ಟಿ.ಪಿ. ವಕೀಲರಿಂದ :-**

9) ನಾನು ಈಗ ಆಟೋ ಚಾಲಕನಾಗಿ ಕೆಲಸ ಮಾಡುತ್ತಿರುತ್ತೇನೆ. ಮೊದಲು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಇದ್ದೆ. ನಾನು ಕೆ.ಎಸ್.ಆರ್.ಸಿ.ಯಲ್ಲಿ ಚಾಲಕನಾಗಿ ಇದ್ದೆ. 2013 ರಲ್ಲಿ ಕೆಲಸದಿಂದ ಹೊರಗಡೆ ಬಂದಿರುತ್ತೇನೆ. ನಾನು ಮತ್ತು ಆರೋಪಿ ಒಟ್ಟಿಗೆ ಸಕಲೇಶಪುರದ ಡಿಪೋದಲ್ಲಿ ಕೆಲಸ ಮಾಡಿರುತ್ತೇವೆ. ನಾನು ಈ ಕೇಸಿನಲ್ಲಿ ಜಿಪಿಎ ಪಡೆದು ಹಾಜರಾಗಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ನಡೆದಿರುವ ವಿಚಾರಗಳು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿ ನನ್ನ ತಂದೆಯಾಗಿದ್ದು ಅವರು ಪಿರ್ಯಾದಿನಲ್ಲಿರುವ ವಿಳಾಸದಲ್ಲಿಯೇ 1996 ರಿಂದ ವಾಸವಾಗಿರುತ್ತಾರೆ.

10) ನಿಮ್ಮ ತಂದೆ ಸಹಿ ಹಾಕುತ್ತಾರೋ ಹೆಬ್ಬೆಟ್ಟು ಹಾಕುತ್ತಾರೋ ಎಂದು ಪ್ರಶ್ನಿಸಲಾಗಿ ಸಾಕ್ಷಿ ಮೊದಲು ಸಹಿ ಹಾಕುತ್ತಿದ್ದು, ಈಗ ಹೆಬ್ಬೆಟ್ಟು ಹಾಕುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆ ಕನ್ನಡ ಬಾಷೆಯಲ್ಲಿ ಸಹಿ ಹಾಕುತ್ತಾರೆ. ನನ್ನ ತಂದೆ ನ್ಯಾಯಾಲಯಕ್ಕೆ ಪಿರ್ಯಾದು ಸಲ್ಲಿಸುವಾಗ ಯಾವ ಭಾಷಯಲ್ಲಿ ಸಹಿ ಮಾಡಿರುತ್ತಾರೆ ಎಂದು ತಿಳಿದುಕೊಂಡಿರುವುದಿಲ್ಲ. ನನಗೆ ಈಗ ತೋರಿಸಿದ ಪಿರ್ಯಾದಿನಲ್ಲಿರುವ ಸಹಿಗಳು ನನ್ನ ತಂದೆ ಚಿಕ್ಕೇಗೌಡದ್ದಾಗಿರುತ್ತದೆ. ಪಿರ್ಯಾದನ್ನು ನಿಸಿ 1ಎಂದು, ಸಾಕ್ಷಿ ಗುರುತಿಸಿದ ಸಹಿಯನ್ನು ನಿಸಿ 1(ಎ) ಯಿಂದ ನಿಸಿ 1(ಸಿ) ಎಂದು ಗುರುತಿಸಲಾಯಿತು.

11) ನನಗೆ ಈಗ ತೋರಿಸಿದ ವಕಾಲತ್‌ನಲ್ಲಿರುವ ಸಹಿ ನನ್ನ ತಂದೆಯದ್ದೇ ಆಗಿರುತ್ತದೆ. ವಕಾಲತ್‌ನಲ್ಲಿರುವ ಸಹಿಯನ್ನು ನಿಸಿ 2 ಎಂದು, ಸಾಕ್ಷಿ ಗುರುತಿಸಿದ ಸಹಿಯನ್ನು ನಿಸಿ 2(ಎ) ಎಂದು ಗುರುತಿಸಲಾಯಿತು. ನನಗೆ ಈಗ ತೋರಿಸಿದ ಪ್ರಮಾಣೀಕೃತ ಹೇಳಿಕೆಯಲ್ಲಿರುವ ಸಹಿ ನನ್ನ ತಂದೆಯದ್ದೆ ಆಗಿರುತ್ತದೆ. ಹೇಳಿಕೆಯನ್ನು ನಿ.ಸಿ. 3 ಎಂದು, ಸಾಕ್ಷಿ ಸಹಿಯನ್ನು ನಿಸಿ 3(ಎ) ಎಂದು ಗುರುತಿಸಲಾಯಿತು. ನಿ.ಸಿ. 1 ರಿಂದ 3 ದಾಖಲಾತಿಗಳಲ್ಲಿ ಸಹಿಗಳು ಬೇರೆ ಬೇರೆ ಬಾಷೆಯಲ್ಲಿದೆ ಎಂದು ಸೂಚಿಸಲಾಗಿ ಸಾಕ್ಷಿ ನಮ್ಮ ತಂದೆ ಕೃಷಿ ಅಧಿಕಾರಿಯಾಗಿದ್ದು, ಕನ್ನಡ ಮತ್ತು ಆಂಗ್ಲ ಬಾಷೆ ಎರಡರಲ್ಲಿಯೂ

ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿ.ಪಿ. 8 ರಲ್ಲಿರುವ ಎಡಗೈನ ಹೆಬ್ಬೆಟ್ಟಿನ ಗುರುತು ನನ್ನ ತಂದೆಯದ್ದೇ ಆಗಿರುತ್ತದೆ.

12) ಪಿರ್ಯಾದಿನಲ್ಲಿರುವ ವಿಚಾರವನ್ನು ನಾನು ತಿಳಿದುಕೊಂಡಿರುತ್ತೇನೆ. ಪಿರ್ಯಾದಿನ ವಿಚಾರವನ್ನು ಯಾವಾಗ ತಿಳಿದುಕೊಂಡಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನ್ಯಾಯಾಲಯಕ್ಕೆ ಸಲ್ಲಿಸಿದಾಗ ತಿಳಿದುಕೊಂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ಕೇಸಿನ ವಿಚಾರಗಳು ಗೊತ್ತಿರಲಿಲ್ಲ ಎಂದು ಸೂಚಿಸಲಾಗಿ ಸಾಕ್ಷಿ ನಮ್ಮ ತಂದೆ ಹೇಳಿರಲಿಲ್ಲ ಎಂದು ನುಡಿಯುತ್ತಾರೆ. ನಾನು ನಮ್ಮ ತಂದೆ ಒಟ್ಟಿಗೆ ವಾಸವಾಗಿರುತ್ತೇವೆ. ನಮ್ಮ ತಂದೆಯೇ ನಮ್ಮ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ ಅನಾರೋಗ್ಯದಿಂದ ಬಳಲುತ್ತಿದ್ದ ಕಾರಣ ಕಳೆದ ಒಂದು ವರ್ಷಗಳಿಂದ ನಾನೇ ನಮ್ಮ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿರುತ್ತೇನೆ. ನಿಪಿ 9 ನ್ನು ಅವರ ಕ್ಲಿನಿಕ್‌ನಲ್ಲಿ ನೀಡಿರುತ್ತಾರೆ. ನಿಪಿ 9 ರಲ್ಲಿ ಕ್ಲಿನಿಕ್ ಹೆಸರು ನಮೂದಾಗಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 9 ರಲ್ಲಿ ಯಾವ ಯಾವ ಖಾಯಿಲೆಗೆ ಚಿಕಿತ್ಸೆ ಕೊಡುತ್ತಿರುತ್ತಾರೆ ಎಂದು ನಮೂದಿಸಿಲ್ಲ ಎನ್ನುವುದು ಸರಿಯಲ್ಲ.

ಮುಂದುವರೆದ **ಪಾಟೀ ಸವಾಲಿಗೆ ಸಮಯಾವಕಾಶ ಕೇಳಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಸಾಕ್ಷಿಯ ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಬೇಲೂರು.